ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಬಳ್ಳಾರಿಯಲ್ಲಿ ಹೊಸದಾಗಿ ಸಂಚಾರಿ ಗ್ರಂಥಾಲಯವನ್ನು 1998-99ರಲ್ಲಿ ಆರಂಭಿಸಲಾಗುವುದೇ?

ಆ) ಹಾಗಿದ್ದಲ್ಲಿ ಈ ಸಂಚಾರಿ ಗ್ರಂಥಾಲಯವು ಬಳ್ಳಾರಿ ತಾಲ್ಲೂಕಿನ ಯಾವ ಯಾವ ಸ್ಥಳಗಳಲ್ಲಿ ಸಂಚರಿಸುವುವು?

ಇ) ಈ ಸಂಚಾರಿ ಗ್ರಂಥಾಲಯಕ್ಕೆ ತಗಲುವ ವೆಚ್ಚವೆಷ್ಟು ಹಾಗೂ ಎಷ್ಟು ಪುಸ್ತಕಗಳನ್ನು ಇಲ್ಲಿ ಒದಗಿಸಲಾಗುವುದು?

ಶ್ರೀ ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು):

ಅ) ಹೌದು.

ಆ) ಬಳ್ಳಾರಿ ನಗರದಲ್ಲಿ ಮಾತ್ರ ಸಂಚರಿಸುವುದು.

ಇ) ವೆಚ್ಚ ರೂ. 8ರಿಂದ 10 ಲಕ್ಷಗಳು. 5000ದಿಂದ 6000 ಪುಸ್ತಕಗಳನ್ನು ಒದಗಿಸಲಾಗುವುದು.

ವಿಷಯ: ಜಿಲ್ಲಾ ಶಿಕ್ಷಕರ ನೇಮಕಾತಿ ಬಗ್ಗೆ.

954 (1607)

ಶ್ರೀ ಯು.ಬಿ.ಬಣಕಾರ (ಹಿರೇಕೆರೂರು): ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಎರಡು ಜಿಲ್ಲೆಗಳ ಉದ್ಯೋಗ ವಿನಿಮಯ ಕಚೇರಿಯಲ್ಲಿ ಹೆಸರು ನೋಂದಾಯಿಸಲಾಗಿದೆ ಎಂಬ ಕಾರಣದಿಂದ 1996ರ ಶಿಕ್ಷಕರ ನೇಮಕಾತಿಯ ಮೊದಿಯಿಂದ ಕೈಬಿಟ್ಟ ಅಭ್ಯರ್ಥಿಗಳ ಪರವಾಗಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದ್ದರೂ ಸಹಾ ಇನ್ನುವರೆಗೆ ಅವರಿಗೆ ನೇಮಕಾತಿ ಆದೇಶ ನೀಡಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ಯಾವಾಗ ನೇಮಕಾತಿ ಆದೇಶ ನೀಡಲಾಗುವುದು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು):

ಅ) ಬಂದಿದೆ.

ಆ) ಸುಪ್ರೀಂ ಕೋರ್ಟ್ ತೀರ್ಪನ್ನು ಅನುಷ್ಠಾನಗೊಳಿಸುವ ಬಗ್ಗೆ ಕಾನೂನು ಇಲಾಖೆಯ ಸಮಾಲೋಚನೆಯೊಂದಿಗೆ ಪರಿಶೀಲಿಸಲಾಗುತ್ತಿದೆ. ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ: ವಿರಾಜಪೇಟೆ ತಾಲ್ಲೂಕಿನಲ್ಲಿ ಇಂಧನ ಇಲಾಖೆಯು ವೆಚ್ಚ ಮಾಡಿದ ಹಣ.

955 (1620)

ಶ್ರೀ ಹೆಚ್.ಡಿ.ಬಸವರಾಜ್ (ವಿರಾಜಪೇಟೆ): ಮಾನ್ಯ ಸಾಂಪ್ರದಾಯಕವಲ್ಲದ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಸಾಂಪ್ರದಾಯಕವಲ್ಲದ ಇಂಧನ ಇಲಾಖೆಯು ವಿರಾಜಪೇಟೆ ತಾಲ್ಲೂಕಿನಲ್ಲಿ 1995-96, 1996-97 ಮತ್ತು 1997-98ರ ಸಾಲಿನಲ್ಲಿ ಎಷ್ಟು ಹಣವನ್ನು ಯಾವ ಯಾವ ಬಾಬ್ತುಗಳಲ್ಲಿ ವೆಚ್ಚ ಮಾಡಿದೆ? (ವಿವರ ನೀಡುವುದು)

ಶ್ರೀ ಬಸವರಾಜ್ ನಿ. ಶಿವಣ್ಣನವರ್ (ಸಾಂಪ್ರದಾಯಕವಲ್ಲದ ಇಂಧನ ರಾಜ್ಯ ಸಚಿವರು):

ಅ) ಸರ್ಕಾರದ ವತಿಯಿಂದ ವಿರಾಜಪೇಟೆ ತಾಲ್ಲೂಕಿನಲ್ಲಿ 1995-96, 1996-97, 1997-98ರ ಸಾಲಿನಲ್ಲಿ ಯಾವ ಬಾಬ್ತುಗಳಲ್ಲಿಯೂ ಹಣವನ್ನು ವೆಚ್ಚ ಮಾಡಿರುವುದಿಲ್ಲ.

ವಿಷಯ: ಧಾರವಾಡ ನಗರದಲ್ಲಿ ಹೊಸದಾಗಿ ಪ್ರೌಢಶಾಲೆಗಳನ್ನು ತೆರೆಯುವುದು.

957 (1623)

ಚಂದ್ರಕಾಂತ ಬೆಲ್ಲದ (ಧಾರವಾಡ): ಮಾನ್ಯ (ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಧಾರವಾಡ ನಗರದಲ್ಲಿರುವ ಖಾಸಗಿ ಹಾಗೂ ಸರ್ಕಾರಿ ಪ್ರೌಢಶಿಕ್ಷಣ ಶಾಲೆಗಳು ಎಷ್ಟು? ಅವುಗಳ ಹೆಸರು ಮತ್ತು ವಿವರ ನೀಡುವುದು.

ಆ) ಧಾರವಾಡ ನಗರದಲ್ಲಿ ಪ್ರೌಢಶಾಲೆಗಳನ್ನು ತೆರೆಯಲು ಶಿಕ್ಷಣ ಇಲಾಖೆಯಿಂದ ಮನವಿ ಬಂದಿದೆಯೇ? ಹಾಗಿದ್ದಲ್ಲಿ ಯಾವ ಯಾವ ಸ್ಥಳದಲ್ಲಿ ಸದರಿ ಶಾಲೆಗಳನ್ನು ತೆರೆಯಲು ಮನವಿ ಸಲ್ಲಿಸಲಾಗಿದೆ. (ವಿವರ ನೀಡುವುದು)

ಇ) ಕಳೆದ ಮೂರು ವರ್ಷಗಳಲ್ಲಿ ಧಾರವಾಡ ನಗರದಲ್ಲಿ ಎಷ್ಟು ಸರ್ಕಾರಿ ಪ್ರೌಢಶಾಲೆಗಳನ್ನು ತೆರೆಯಲಾಗಿದೆ (ವಿವರ ನೀಡುವುದು)